**<u>ಒ.ಎಸ್.ನಂಬ್ರಃ 325/2012</u>** **<u>ಡಿ.ಡಬ್ಲ್ಯೂ: 1</u>**

ದಿನಾಂಕಃ 04-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಸಿ ಆರ್ ಪಿ ರವರಿಂದ</u>

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ಕೃಷಿ ಕೆಲಸ ಮಾಡಿಕೊಂಡಿದ್ದೇನೆ. ನನ್ನ ತಾಯಿಯ ಹೆಸರು ಮೀನಾಕ್ಷಿಯಮ್ಮ. ನನ್ನ ತಂದೆ 1 ನೇ ಪ್ರತಿವಾದಿ. ಮೀನಾಕ್ಷಿಯಮ್ಮರವರ ತಾಯಿಯ ಹೆಸರು ಕಾಶಿಯಮ್ಮ ಮತ್ತು ತಂದೆಯ ಹೆಸರು ನಾರಾಯಣ ರಾವ್. ಕಾಶಿಯಮ್ಮ ಮತ್ತು ನಾರಾಯಣ ರಾವ್ ರವರಿಗೆ ನನ್ನ ತಾಯಿ ಮೀನಾಕ್ಷಿಯಮ್ಮ ಮತ್ತು 7 ನೇ ಪ್ರತಿವಾದಿ ಸೀತಾಲಕ್ಷ್ಮೀ ಇಬ್ಬರು ಮಕ್ಕಳು. ನನ್ನ ತಾಯಿಗೆ ಒಟ್ಟು 6 ಜನ ಮಕ್ಕಳು. ವಾದಿ, ನಾನು, 2 ನೇ ಪ್ರತಿವಾದಿ ಮತ್ತು 4 ರಿಂದ 6 ನೇ ಪ್ರತಿವಾದಿಗಳು. 4 ನೇ ಪ್ರತಿವಾದಿ ತೀರಿಕೊಂಡಿದ್ದು, ಅವರಿಗೆ ಹೆಂಡತಿ ಮತ್ತು ಮಕ್ಕಳು ಇರುವುದಿಲ್ಲ. 7 ನೇ ಪ್ರತಿವಾದಿಗೂ ಕೂಡ 6 ಜನ ಮಕ್ಕಳು.

ನನ್ನ ತಾಯಿ ಮೀನಾಕ್ಷಿಯಮ್ಮ 1971 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆಗ ನನಗೆ ಸುಮಾರು 8 ವರ್ಷ ಆಗಿತ್ತು. ಆ ಸಮಯದಲ್ಲಿ ವಾದಿಗೆ ಸುಮಾರು 13 ವರ್ಷವಾಗಿತ್ತು. ನನ್ನ ತಾಯಿ ತೀರಿಕೊಳ್ಳುವಾಗ ಎಲ್ಲಾ ಮಕ್ಕಳು ಅಪ್ರಾಪ್ತರಾಗಿದ್ದರು ಎಂದರೆ ಸರಿ. ನನ್ನ ಅಜ್ಜಿ ಕಾಶಿಯಮ್ಮ ದಿಃ 28-12-2008 ರಂದು ತೀರಿಕೊಂಡಿರುತ್ತಾರೆ, ಅವರು ತೀರಿಕೊಳ್ಳುವಾಗ ಅವರಿಗೆ ಸುಮಾರು 82 ವರ್ಷವಾಗಿತ್ತು. ಕಾಶಿಯಮ್ಮ ಎಲ್ಲಿಯವರೆಗೆ ಓದಿದ್ದಾರೆ ಎಂದು ಗೊತ್ತಿಲ್ಲ. ಕಾಶಿಯಮ್ಮರವರಿಗೆ ಓದು ಬರಹ ಇರಲಿಲ್ಲ ಎಂದರೆ ಸರಿಯಲ್ಲ.

ನಿ.ಡಿ.2 ರ ಓ ಎಸ್ 271/1993 ರ ತೀರ್ಪಿನ ದಾಖಲೆಯನ್ನು 7 ನೇ ಪ್ರತಿವಾದಿ ಸಲ್ಲಿಸಿರುವುದಾಗಿ ತೋರಿಸಲು ಹಾಜರುಪಡಿಸಿರುತ್ತೇನೆ. ಆ ದಾವೆಯಲ್ಲಿ ನಾನು ಕಾಶಿಯಮ್ಮನವರ ಜಿ ಪಿ ಎ ದಾರನಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ನಿ.ಡಿ.7 ರ ಓ ಎಸ್ 426/1996 ರ ತೀರ್ಪಿನ ದಾಖಲೆಯನ್ನು ಕಾಶಿಯಮ್ಮನವರ ಅಣ್ಣನ ಮಗ ಸಲ್ಲಿಸಿರುವುದಾಗಿ ತೋರಿಸಲು ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲೂ ಕೂಡ ನಾನು ಕಾಶಿಯಮ್ಮನವರ ಜಿ ಪಿ ಎ ದಾರನಾಗಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ಕಾಶಿಯಮ್ಮನವರಿಗೆ ಇಂಗ್ಲೀಷ ಓದಲು ಬರೆಯಲು ಬರುತ್ತಿರಲಿಲ್ಲ. ನಿ.ಡಿ.2 ಮತ್ತು ನಿ.ಡಿ.7 ರ ದಾವೆಗಳಲ್ಲಿ ಕಾಶಿಯಮ್ಮನ ಪರವಾಗಿ ನಾನೇ ನಡೆಸಿರುತ್ತೇನೆ. ಕಾಶಿಯಮ್ಮನವರಿಗೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ ಎಂದು ಆ 2 ದಾವೆಗಳನ್ನು ನಾನೇ ನಡೆಸಿರುತ್ತೇನೆ.

ಈ ದಾವೆಯಲ್ಲಿ ದಾವಾ ಐಟಂ ನಂ.1 ಕಾಶಿಯಮ್ಮ ಮತ್ತು ಅವರ ಮಕ್ಕಳಿಗೆ ಗಂಡನ ಕಡೆಯಿಂದ ಬಂದ ಆಸ್ತಿ ಎಂದರೆ ಸರಿ. ದಾವಾ ಐಟಂ ನಂ.1 ಗೇಣಿದಾರರ ಪರವಾಗಿ ತೀರ್ಪು ಆಗಿದೆ. ಶ್ರೀನಿವಾಸ ರಾವ್ ಎಂದರೆ ಕಾಶಿಯಮ್ಮನ ಅಣ್ಣ. ಶ್ರೀನಿವಾಸ ರಾವ್ ರವರು ಕಾಶಿಯಮ್ಮನ ಪರವಾಗಿ ಒಂದು ವಿಲ್ ಮಾಡಿದ್ದಾರೆ ಎಂದು ಹೇಳಿದ್ದೇವೆ ಎಂದರೆ ಸರಿ. ಆ ವಿಲ್ ನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ, ಆ ವಿಲ್ ನ್ನು

ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಐಟಂ ನಂ.2 ರಿಂದ 5, 7, 9 ರಿಂದ 14 ಕಾಶಿಯಮ್ಮರವರಿಗೆ ಶ್ರೀನಿವಾಸ ರಾವ್ ಮಾಡಿದ ವಿಲ್ ಮೂಲಕ ಬಂದಿದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಆ ಆಸ್ತಿಗಳು ಶ್ರೀನಿವಾಸ ರಾವ್ ರವರಿಗೆ ನಿ.ಡಿ.4 ರ ವಿಭಾಗ ಪತ್ರದ ಮೂಲಕ ಬಂದಿರುತ್ತದೆ.

ನಿ.ಡಿ.4 ವಿಭಾಗ ಪತ್ರದಲ್ಲಿರುವ ಎಲ್ಲಾ ಆಸ್ತಿಗಳು ಪಿತ್ರಾರ್ಜಿತ ಸ್ವತ್ತುಗಳಲ್ಲ. ಶ್ರೀನಿವಾಸ ರಾವ್ ರವರು ದಿಃ 08-12-1985 ರಲ್ಲಿ ತೀರಿಕೊಂಡಿರುತ್ತಾರೆ. ಓ ಎಸ್ 426/1996 ರ ದಾವೆಯಲ್ಲಿ ದೃಢೀಕೃತ ವೀಲುನಾಮೆ ಹಾಜರುಪಡಿಸಿರುತ್ತೇನೆ. ವೀಲುನಾವೆಯ ಮೂಲ ಪ್ರತಿ ಯಾರ ಬಳಿ ಇದೆ ಎಂದರೆ, ನಾನು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿ.ಡಿ.7 ರ ತೀರ್ಪಿನಲ್ಲಿ ಕಾಣಿಸಿರುವ ಆಸ್ತಿಗಳೊಂದಿಗೆ ಬೇರೆ ಆಸ್ತಿಗಳನ್ನು ಕೂಡ ಶ್ರೀನಿವಾಸ ರಾವ್ ರವರು ವೀಲುನಾಮೆ ಮಾಡಿರುತ್ತಾರೆ. ಆ ಬೇರೆ ಆಸ್ತಿಗಳು ಕೂಡ ವಿಭಾಗ ಪತ್ರದ ಮೂಲಕ ಬಂದಿರುತ್ತವೆ. ವೀಲುನಾವೆಯಲ್ಲಿ ಯಾವುದೇ ಸರ್ವೆ ನಂಬರ ಇರುವುದಿಲ್ಲ.

ಕಾಶಿಯಮ್ಮನವರು ಮಾಡಿದ್ದಾರೆ ಎನ್ನಲಾದ ವೀಲುನಾಮೆಗೆ ಮಂಜುನಾಥ ಮತ್ತು ಕೊರಗಿ ಶೆಟ್ಟಿರವರು ಸಾಕ್ಷಿ ಹಾಕಿರುತ್ತಾರೆ. ವೀಲುನಾಮೆ ಮಾಡುವಾಗ ಕಾಶಿಯಮ್ಮನವರಿಗೆ ಸುಮಾರು 75-80 ವರ್ಷ ಇರಬಹುದು. ಆ ಸಮಯದಲ್ಲಿ ಅವರು ನನ್ನ ಮೇಲೆ ಅವಲಂಬಿತರಾಗಿದ್ದರು ಎಂದರೆ ಸರಿ. ವೀಲುನಾಮೆ ಮಾಡುವ ಸಮಯದಲ್ಲಿ ನಾನು ಕೂಡ ಇದ್ದೆ. ವೀಲುನಾಮೆಗೆ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಲಾಗಿದೆ. ವೀಲುನಾಮೆ ತಯಾರಿಸಲು ಬರಹಗಾರರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಕಾಶಿಯಮ್ಮನವರಿಗೆ ವೀಲುನಾಮೆ ಮಾಡಿಕೊಡಲು ಅವರಿಗೆ ಮನಸ್ಥಿತಿ ಸರಿಯಾಗಿ ಇರಲಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ .